**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ದಿನೇಶ್ ಗೂಳಿಗೌಡ ಇವರು ನಿಯಮ 330 ರ ಮೇರೆಗೆ ನೀಡಿರುವ ಸೂಚನೆಗೆ ಉತ್ತರ :-**

**ಸೂಚನೆ:-** ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ ಹಿರಿಯ ಸಹಾಯಕ ವೃಂದದ ಮುಂಬಡ್ತಿಯಲ್ಲಿ ಸಹಾಯಕರಿಗೆ ಮತ್ತು ಶೀಘ್ರಲಿಪಿಗಾರರಿಗೆ 5:2 ಅನುಪಾತವನ್ನು ನೀಡಲಾಗುತ್ತಿದ್ದು, ಇದರಿಂದ ಲಿಪಿಕ ವೃಂದದ ಹುದ್ದೆಗಳಾದ ಸಹಾಯಕ ಮತ್ತು ಕಿರಿಯ ಸಹಾಯಕ ವೃಂದದ ನೌಕರರಿಗೆ ತಮ್ಮದೇ ವೃಂದದ ಗ್ರೂಪ್ ಬಿ & ಎ ವೃಂದದ ಹುದ್ದೆಗಳಲ್ಲಿ ಮುಂಬಡ್ತಿಯಲ್ಲಿ ಅವಕಾಶಗಳು ಕಡಿಮೆಯಾಗುತ್ತಿರುವ ಬಗ್ಗೆ ಸಹಾಯಕ/ಕಿರಿಯ ಸಹಾಯಕ ವೃಂದದ ನೌಕರರು 2017 ರಿಂದ ನಿರಂತರವಾಗಿ ಮನವಿಯನ್ನು ಸಲ್ಲಿಸುತ್ತಾ ಬಂದಿರುತ್ತಾರೆ. ಸದರಿ ಮನವಿಯ ಕುರಿತಂತೆ ಸಿಆಸುಇ (ಆಡಳಿತ-ಬಿ) ಶಾಖೆಯ ಕಡತ ಸಂಖ್ಯೆ: ಸಿಆಸುಇ 236 ಆಹಿಸೇ 2017 ಮತ್ತು ಸಿಆಸುಇ 216 ಆಹಿಸೇ 2018 ರಲ್ಲಿ ಅನುಪಾತ ರದ್ದುಪಡಿಸುವಂತೆ ಅಭಿಪ್ರಾಯಿಸಿರುವ ಮನವಿಯ ಕುರಿತು ಯಾವುದೇ ಕ್ರಮ ಕೈಗೊಳ್ಳದಿರುವ ಕುರಿತು ಸದನದಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

**ಉತ್ತರ:-**

ಕರ್ನಾಟಕ ಸರ್ಕಾರ ಸಚಿವಾಲಯ ಸೇವೆಗಳು (ನೇಮಕಾತಿ) ನಿಯಮಗಳು 2019 ರನ್ವಯ ಸಚಿವಾಲಯದ ಹಿರಿಯ ಸಹಾಯಕ ವೃಂದಕ್ಕೆ ಮುಂಬಡ್ತಿ ಹೊಂದಲು ಪೋಷಕ ವೃಂದವಾದ ಸಹಾಯಕ ಹಾಗು ಶೀಘ್ರಲಿಪಿಗಾರರ ವೃಂದದಲ್ಲಿ ಐದು ವರ್ಷಗಳ ಸೇವೆ ಸಲ್ಲಿಸಬೇಕಿದ್ದು, ಐದು ವರ್ಷಗಳ ಸೇವೆ ಸಲ್ಲಿಸಿರುವ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಮೂರು ವರ್ಷಗಳ ಸೇವೆ ಸಲ್ಲಿಸಿರುವ ಅಭ್ಯರ್ಥಿಗಳನ್ನು ಪರಿಗಣಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

ಹಿರಿಯ ಸಹಾಯಕರ ವೃಂದಕ್ಕೆ ಸಹಾಯಕ ಮತ್ತು ಶೀಘ್ರಲಿಪಿಗಾರರ ವೃಂದದಿಂದ 5:2 ಅನುಪಾತದಂತೆ ಮುಂಬಡ್ತಿ ನೀಡುತ್ತಿದ್ದು, 07 ಬಿಂದುಗಳ ಅನುಪಾತದಲ್ಲಿ 04 ಮತ್ತು 07ನೇ ಬಿಂದು ಶೀಘ್ರಲಿಪಿಗಾರರ ವೃಂದಕ್ಕೆ ಸೇರಿದ್ದಾಗಿರುತ್ತದೆ. ಈ ಅನುಪಾತವನ್ನು 1983ರ ಡಿಸೆಂಬರ್ ನಿಂದ ಅನುಸರಿಸಲಾಗುತ್ತಿದೆ.

ಹಿರಿಯ ಸಹಾಯಕರ ವೃಂದಕ್ಕೆ ಮುಂಬಡ್ತಿ ಹೊಂದಲು ಪೋಷಕ ವೃಂದದಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ನಿಗದಿಪಡಿಸಿರುವ ಅನುಪಾತವನ್ನು ತೆಗೆದುಹಾಕುವಂತೆ ಕರ್ನಾಟಕ ಸರ್ಕಾರ ಸಚಿವಾಲಯದ ಸಹಾಯಕರ ಮತ್ತು ಕಿರಿಯ ಸಹಾಯಕರ ಸಂಘವು ಮನವಿಯನ್ನು ಸಲ್ಲಿಸಿರುತ್ತದೆ. ಅದೇ ರೀತಿ ಪ್ರಸ್ತುತ ಚಾಲ್ತಿಯಲ್ಲಿರುವ 5:2 ಅನುಪಾತವನ್ನು ಪರಿಷ್ಕರಿಸಿ 5:3ಗೆ ನಿಗದಿಪಡಿಸಿ ನ್ಯಾಯ ದೊರಕಿಸಿಕೊಡುವಂತೆ ಕರ್ನಾಟಕ ಸರ್ಕಾರ ಸಚಿವಾಲಯ ಶೀಘ್ರಲಿಪಿಗಾರರ ಸಂಘವು ಸಹ ಮನವಿಯನ್ನು ಸಲ್ಲಿಸಿರುತ್ತದೆ.

ಶೀಘ್ರಲಿಪಿಗಾರರ ವೃಂದದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರಿಗೆ ಮುಂಬಡ್ತಿ ಹೊಂದುವಲ್ಲಿ ಅವಕಾಶಗಳು ಕಡಿಮೆ ಇರುವ ಕಾರಣ, 3:1 ಇದ್ದ ಅನುಪಾತವನ್ನು 1983 ರಲ್ಲಿ 5:2ಗೆ ಪರಿಷ್ಕರಿಸಲಾಗಿದ್ದು, ಪ್ರಸುತ ಈ ಅನುಪಾತವು ಜಾರಿಯಲ್ಲಿರುತ್ತದೆ. ಹಿರಿಯ ಸಹಾಯಕರ ವೃಂದಕ್ಕೆ ಮುಂಬಡ್ತಿಯನ್ನು ಹೊಂದಲು ಪೋಷಕ ವೃಂದಗಳಾದ ಸಹಾಯಕ ಹಾಗೂ ಶೀಘ್ರಲಿಪಿಗಾರರ ವೃಂದದಲ್ಲಿ ನಿಗದಿಪಡಿಸಿರುವ ಅನುಪಾತದ ಬಗ್ಗೆ ಸ್ವೀಕೃತವಾಗಿರುವ ಮನವಿಗಳನ್ನು ಪರಿಶೀಲಿಸಲಾಗುತ್ತಿದ್ದು ಇದಕ್ಕೆ ಎರಡೂ ವೃಂದದ ಸಂಘಗಳಿಗೆ ಇನ್ನು ಹೆಚ್ಚಿನ ಮಾಹಿತಿಯನ್ನು ನೀಡುವಂತೆ ಸೂಚಿಸಲಾಗಿದ್ದು, ಈ ವಿಷಯವು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ.

ಸಿಆಸುಇ 232 ಆಹಿಸೇ 2023

(ಸಿದ್ದರಾಮಯ್ಯ)
ಮುಖ್ಯಮಂತ್ರಿ